ಅಪರಾಧಿ ಪ್ರಜ್ಞೆಯಿಂದ ಹೊರಬರಲೇ ಇಲ್ಲ. ಆಮೇಲೆ ಅವರ ಮಾತು, ವರ್ತನೆ ಎಲ್ಲವೂ ಬದಲಾಯಿತು. ಅವರ ಮನಃಸ್ಥಿತಿಯನ್ನು ಅಪ್ಪ ದುರುಪಯೋಗ ಮಾಡಿಕೊಂಡರು.

ಸಾಯೋದರೊಳಗೆ ಒಂದು ಸಲ ತೌರಿಗೆ ಹೋಗಬೇಕು ಅಂತ ಒಂದು ಸಲ ಅಮ್ಮ ನನ್ನತ್ರ ಹೇಳ್ತಿದ್ದರು. ನನ್ನ ತೌರಿನ ಕಡೆಯ ಹೆಣ್ಣು ತಂದು ನಿನಗೆ ಮದುವೆ ಮಾಡಿಸ್ತೀನಿ ಅನ್ನಿದ್ದರು. ಆಮೇಲೆ ಅವರ ಸಹವಾಸವೇ ಬೇಡ ಅಂದರು. ಕೊನೆಗೂ ಅವರು ಹುಟ್ಟಿ ಬೆಳೆದ ಮನೆಯೊಳಕ್ಕೆ ಹೋಗಲು ಆಗಲಿಲ್ಲ. ಒಂದು ಸಲ ನಂಜನಗೂಡು ದೇವಸ್ಥಾನಕ್ಕೆ ಕರಕೊಂಡು ಹೋಗು ಅಂದರು. ನಾನೇ ಕರಕೊಂಡು ಹೋಗಿದ್ದೆ. ನನ್ನ ತೌರುಮನೆ ನೋಡಬೇಕು ಅಂತ ಆಸೆಪಟ್ಟರು. ಅಲ್ಲಿಗೂ ಕರಕೊಂಡು ಹೋಗಿದ್ದೆ. ಅವರ ಮನೆಯ ಬೀದಿಯಲ್ಲಿ ದೂರದಲ್ಲೇ ಕಾರು ನಿಲ್ಲಿಸು ಅಂದರು. ದೂರದಿಂದಲೇ ಮನೆ ಕಡೆ ನೋಡಿದರು. ಹತ್ತು ನಿಮಿಷ ನೋಡಿದ ಮೇಲೆ ಸಾಕು ನಡಿ ಹೋಗೋಣ ಅಂದರು. ನಾವಿದ್ದಾಗ ಅವರ ಮನೆಯಿಂದ ಯಾರೂ ಹೊರಕ್ಕೆ ಬರಲಿಲ್ಲ. ಮನೆಯಲ್ಲಿ ಜನ ಇದ್ದರೋ ಇಲ್ಲವೋ ಗೊತ್ತಾಗಲಿಲ್ಲ. ಅಪ್ಪ, ಅಮ್ಮ ಇಲ್ಲದ ಮನೆಗೆ ನಾನು ಹೋಗಲ್ಲ ಅಂದು ಸುಮ್ಮನಾದರು. ಅಪ್ಪ, ಮಗ ಇದೇ ಊರಲ್ಲಿದ್ದರೂ ಒಟ್ಟಿಗೆ ಇಲ್ಲವಲ್ಲ ಯಾಕೆ ಅಂತ ನೀವು ಕೇಳಬಹುದು ಅನ್ನಿಸಿ ನಾನೇ ಎಲ್ಲವನ್ನೂ ಹೇಳಿಬಿಟ್ಟೆ. ಇದನ್ನೆಲ್ಲ ನಿಮಗೆ ಹೇಳಬೇಕಿರಲಿಲ್ಲ. ನಿಮ್ಮ ಸರ್ವೀಸಿನಲ್ಲಿ ಇಂಥ ಎಷ್ಟೋ ಸಾವುಗಳನ್ನು ನೋಡಿರ್ತೀರಿ. ಪ್ರತಿ ಸಾವಿನ ಹಿಂದೆ ನಿಗೂಢ ಕಾರಣಗಳು, ಹೇಳಿಕೊಳ್ಳಲಾಗದ ನೋವುಗಳು ಇರ್ತವೆ. ನೀವು ಪೊಲೀಸರು ಎಲ್ಲವನ್ನೂ ಕಾನೂನಿನ ಚೌಕಟ್ಟಿನಲ್ಲಿ ನೋಡ್ತೀರಿ. ಅದಕ್ಕೇ ಇದನ್ನೆಲ್ಲ ಹೇಳಬೇಕು ಅನ್ನಿಸಿತು. ಈಗ ನನ್ನ ಮನಸ್ಸಿಗೆ ನಿರಾಳವಾಯ್ತು. ಪಿಎಂ ರಿಪೋರ್ಟ್ ಬಂದರೆ ಸಾವಿನ ಕಾರಣ ಗೊತ್ತಾಗುತ್ತೆ' ಅನ್ನುತ್ತ ನನ್ನ ಮಾತು ಮುಗೀತು ಅನ್ನುವ ಭಾವದಲ್ಲಿ ಇನ್‌ಸ್ಪೆಕ್ಟರ್ ಮುಖ ನೋಡಿದ. ಪಿಎಂ ಮಾಡಿಸೋ ಅಗತ್ಯ ಇರಲಿಲ್ಲ. ಎಪ್ಪತ್ತು ವರ್ಷದ ಬಲರಾಮ್ ಒಂಟಿಯಾಗಿ ಇದ್ದುದಕ್ಕೆ ಅವರದೇ ಕಾರಣಗಳಿರಬಹುದು. ಮಗ ತುಂಬಾ ಟ್ರಾನ್ಸ್‌ಫರೆಂಟ್ ಆಗಿ ಎಲ್ಲವನ್ನೂ ಹೇಳಿದ್ದಾನೆ. ಬಲರಾಮ್ ಸಾವಿನಲ್ಲಿ ಅವನ ಕೈವಾಡ ಇಲ್ಲ. ಬಾಡೀನ ಪಿಎಂಗೆ ಕಳಿಸ್ತೀನಿ ಅಂದರೆ ಬೇಡ ಅನ್ನಬಹುದು. ಆಮೇಲೆ ಅವನ ಜತೆ ಮಾತಾಡಿ ಕೆಲವು ಸಾವಿರಗಳನ್ನಾದರೂ ಕೀಳಬಹುದು ಅಂದುಕೊಂಡಿದ್ದ ಇನ್‌ಸ್ಪೆಕ್ಟರ್‌ಗೆ ನಿರಾಸೆಯಾಯಿತು.

ಬಲರಾಮ್ ಅವರಿಗೆ ಇನ್ನೆಷ್ಟು ಹೆಂಗಸರ ಸಂಪರ್ಕ ಇತ್ತೋ? ಯಾರಾದರೂ ಬಲರಾಮ್ ಅವರ ಆಸ್ತಿಯಲ್ಲಿ ನಮಗೂ ಪಾಲು ಬರಬೇಕು ಅಂತ ತಕರಾರು ಎತ್ತಿ ಕೋರ್ಟಿಗೆ ಹೋಗಬಹುದು. ವಿಚಾರಣೆ ಸಮಯದಲ್ಲಿ ಪಿಎಂ ಯಾಕೆ ಮಾಡಿಸಲಿಲ್ಲ ಅಂತ ಕೋರ್ಟು ಕೇಳಬಹುದು ಅನ್ನಿಸಿ ಕಳಿಸುವ ನಿರ್ಧಾರ ಮಾಡಿದ್ದರು. ಹೊರಡುವಾಗ, 'ಮಿ. ಅರುಣ್, ಸ್ಟೇಷನ್ನಿಗೆ ಬಂದು ಒಂದು ಸ್ಟೇಟ್‌ಮೆಂಟ್ ಬರೆದು ಕೊಡಿ' ಅಂತ ಹೇಳಿಹೋದರು.

ಇನ್‌ಸ್ಪೆಕ್ಟರ್ ಹೋದ ಮೇಲೆ ಮನೆಯಲ್ಲಿ ಕೂತಿರಲೂ ಬೇಸರವಾಗಿ ಅರುಣ ಎದ್ದು ಹೊರಬಂದ. ಇದು ಅಮ್ಮ ಬದುಕಿದ್ದ ಮನೆ. ಅವಳ ಜತೆ ಕಳೆದ ನೆನಪುಗಳು ಇಲ್ಲಿವೆ. ಅಮ್ಮನಿಗೆ ಈ ಮನೆಯ ಬಗ್ಗೆ ವಿಚಿತ್ರ ವ್ಯಾಮೋಹಗಳಿದ್ದವು ಅನ್ನಿಸಿತು. ಅಮ್ಮನ ಬಟ್ಟೆ ಬರೆ, ಕನ್ನಡಕ, ಚಪ್ಪಲಿ, ಪುಸ್ತಕಗಳು, ಬಳಸುತ್ತಿದ್ದ ಎಲ್ಲ ವಸ್ತುಗಳನ್ನು ಅರುಣ ಜೋಪಾನ ಮಾಡಿದ್ದ. ಈಗ ಅವನ್ನೆಲ್ಲ ತಂದು ಈ ಮನೆಯಲ್ಲಿಟ್ಟರೆ, ಅಮ್ಮನ ಆತ್ಮಕ್ಕೆ ಸಮಾಧಾನ ಆಗಬಹುದು ಅನ್ನಿಸಿದ ಕೂಡಲೇ ಅವನು ಭಾವುಕನಾದ. ಸ್ವಲ್ಪ ಹೊತ್ತು ಸುಮ್ಮನೆ ಕೂತಿದ್ದ. ಅಪ್ಪನ ವಸ್ತುಗಳನ್ನೆಲ್ಲ ಮನೆಯಿಂದ ಹೊರಕ್ಕೆ ಎಸೆಯಬೇಕು. ಪುಸ್ತಕ, ಫರ್ನೀಚರುಗಳನ್ನು ಗಣಪತಿಗೆ, ಬಟ್ಟೆ, ಬರೆಗಳನ್ನು ಬಡವರಿಗೆ ಕೊಡಬೇಕು. ಬ್ಯಾಂಕಿನಲ್ಲಿರುವ ಬಲರಾಂ ಅವರ ಹಣವನ್ನು ಯಾವುದಾದರೂ ಅನಾಥಾಶ್ರಮಕ್ಕೆ ಕೊಡಬೇಕು. ಅಮ್ಮನ ನೆನಪಿಗೆ ಮನೆಯನ್ನು ಯಾರಿಗೂ ಬಾಡಿಗೆಗೆ ಕೊಡದೆ ಹಾಗೇ ಉಳಿಸಿಕೊಳ್ಳಬೇಕು.